<u>ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **2111/2025** ಸಿ. ಡಬ್ಲ್ಯೂ: **5** ಪಿ ಡಬ್ಲ್ಯೂ ಃ **5**</u>

ಸಾಕ್ಷಿಯ ಹೆಸರು ಃ ಕರಿಬಸಪ್ಪ ಬಡಿಗೇರ

ತಂದೆಯ ಹೆಸರು ಃ ಶೇಖರಪ್ಪ.

ವಯಸ್ಸು ಃ 51 ವರ್ಷ

ಉದ್ಯೋಗ ಃ ವ್ಯಾಪಾರ.

ವಾಸಸ್ಥಳ ಃ ಲಕ್ಷ್ಮೇಶ್ವರ, ತಾಃ ಲಕ್ಷ್ಮೇಶ್ವರ.

ದಿನಾಂಕಃ 15/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. ಚಾಸಾ 1 ನನ್ನ ಅಳಿಯ. ಚಾಸಾ 4 ನನ್ನ ಅತ್ತಿಗೆ. ಚಾಸಾ 6 ರ ಪರಿಚಯವಿಲ್ಲ. ಮೃತ ಪ್ರಕಾಶ ಗಣಪತಿ ನನ್ನ ಮಾವ. 1 ನೇ ಆರೋಪಿ ನೋಡಿದ್ದೀರಾ ಎಂದರೆ ಇಲ್ಲ. ದಿಃ 25-06-2025 ರಂದು ನನ್ನ ಮಾವ ಬೆಳಿಗ್ಗೆ 09-00 ಗಂಟೆಗೆ ಮನೆ ಬಿಟ್ಟು ಛಬ್ಬಿ ಗಣಪತಿ ದೇವಸ್ಥಾನಕ್ಕೆ ಪಲ್ಸರ್ ಬೈಕ ನಂಬರ ಕೆಎ-26-ಇ-7184 ನ್ನು ತೆಗೆದುಕೊಂಡು ಅಲ್ಲಿಗೆ ಹೋಗಿದ್ದರು. ನಂತರ ಕುಂದಗೋಳದ ಅಕ್ಷಯ ಗ್ಯಾಸ್ ಗೋಡೌನ್ ಬಳಿ ಹೋಗುತ್ತಿದ್ದಾಗ ಕುಂದಗೋಳದಿಂದ ಗ್ಯಾಸ್ ಗೋಡೌನ್ ಗೆ ಹೋಗುತ್ತಿದ್ದ ಬುಲೋರೋ ವಾಹನ ಕೆಎ-25-ಡಿ-7212 ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಗೋಡೌನ್ ಗೆ ಬಲ ತಿರುವು ತೆಗೆದುಕೊಳ್ಳುವಾಗ ನನ್ನ ಮಾವನ ಮೋಟಾರ್ ಸೈಕಲಗೆ ಡಿಕ್ಕಿ ಪಡಿಸಿದ್ದು, ಬೈಕ್ ಕೆಳಗೆ ಬಿದ್ದಾಗ ನನ್ನ ಮಾವನ ತಲೆಗೆ ಭಾರಿ ಪೆಟ್ಟು ಬಿದ್ದಿದ್ದು ನನಗೆ ಚಾಸಾ 1 ನನಗೆ ಕರೆ ಮಾಡಿ ಅಪಘಾತದ ವಿಚಾರ ತಿಳಿಸಿದ್ದು, ಆಗ ನಾನು ಲಕ್ಷ್ಮೇಶ್ವರದಲ್ಲಿದ್ದೆ. ಆಗ ಸಮಯ 09-30 ಆಗಿತ್ತು. ನಂತರ ನಾನು, ಚಾಸಾ 1 ಮತ್ತು ಚಾಸಾ 4 ಅವರು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿದ್ದೇವು. ನಾವು ಕಿಮ್ಸ ಆಸ್ಪತ್ರೆಗೆ ಹೋಗುವಷ್ಟರಲ್ಲಿ ನನ್ನ ಮಾವ ಮೃತ ಪಟ್ಟಿದ್ದ, ಅಲ್ಲಿದ್ದವನ್ನು ಕೇಳಿದಾಗ ಕುಂದಗೋಳ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಕರೆ ತಂದಾಗ ಮೃತ ಪಟ್ಟಿದ್ದಾಗಿ ಹೇಳಿದ್ದರು. ಅಪಘಾತವಾದಾಗ ಸಮಯ ಎಷ್ಟಾಗಿತ್ತು ಮತ್ತು ದೂರನ್ನು ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು: ಮಾನ್ಯ ಸಸಅ ರವರಿಂದ

2. ಆರೋಪಿ ಬುಲೋರೋವನ್ನು ಕುಂದಗೋಳ ಕಡೆಯಿಂದ ಇಂಡೇನ್ ಗ್ಯಾಸ್ ಗೋಡೌನ್ ಕಡೆಗೆ ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಮೋಟಾರ್ ಸೈಕಲಗೆ ಡಿಕ್ಕಿ ಪಡಿಸಿದ್ದಾನೆ ಎಂದರೆ ಸರಿ. ಚಾಲಕನ ಹೆಸರು ಕೇಳಲಾಗಿ ರಾಜಶೇಖರ ಸಿದ್ಧನಣ್ಣವರ ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಮಃ 02-00 ಗಂಟೆಗೆ ನಾನು ಮತ್ತು ಚಾಸಾ 1 ಅವರು ಲಕ್ಷ್ಮೇಶ್ವರದಲ್ಲಿದ್ದಾಗ ಕರೆ ಬಂತು ಎಂದರೆ ಸರಿ. ಅಪಘಾತ ಮಃ 01-45 ಕ್ಕೆ ಆಗಿದೆ ಎಂದರೆ ಸರಿ. ಈ ಎಲ್ಲ ವಿಚಾರ ಹೇಳಿ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ. 6 ರಂತೆ ಹೇಳಿಕೆ ನೀಡಿದ್ದರು, ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಸಿ ಎಸ್ ಪಿ ವಕೀಲರಿಂದ ಃ

3. ಮೃತ ಪ್ರಕಾಶ ನನ್ನ ಮಾವ. ಚಾಸಾ 4 ಗದಗ ನ್ಯಾಯಾಲಯದಲ್ಲಿ ನನ್ನ ಮಾವನ ಮರಣಕ್ಕೆ ಸಂಬಂಧಪಟ್ಟಂತೆ ಪರಿಹಾರ ಕೋರಿ ಅರ್ಜಿ ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸಗೆ ಅನುಕೂಲವಾಗಲಿ ಎಂದು ಆರೋಪಿಯ ವಿರುದ್ಧ ಚಾಸಾ 1 ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಹೇಗಾಯಿತು ಎಂದು ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ. ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.